International Journal of Kannada Research
www.kannadajournal.com

ISSN: 2454–5813
IJKR 2022; 8(3): 36-40
© 2022 IJKR
www.kannadajournal.com
Received: 18-06-2022
Accepted: 22-07-2022

**ಪ್ರವೀಣ ಹೆಚ್.ದಾಗಿನ್ನಕಟ್ಟೆ**
ಸಂಶೋಧಕರು
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ,
ಕರ್ನಾಟಕ, ಭಾರತ

**Corresponding Author:**
**ಪ್ರವೀಣ ಹೆಚ್.ದಾಗಿನ್ನಕಟ್ಟೆ**
ಸಂಶೋಧಕರು
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ,
ಕರ್ನಾಟಕ, ಭಾರತ

# ವಚನ ಸಾಹಿತ್ಯ: ಒಂದು ವೈಚಾರಿಕ ಪಠ್ಯ

**ಪ್ರವೀಣ ಹೆಚ್.ದಾಗಿನ್ನಕಟ್ಟೆ**

೧೨ನೇ ಶತಮಾನದಲ್ಲಿ ನಡೆದ ವಚನ ಸಾಹಿತ್ಯದ ಒಂದು ಕ್ರಾಂತಿ, ಅದು ಈಡೀ ವಿಶ್ವಕ್ಕೆ ಮಾದರಿಯಾದ ಒಂದು 'ಮಾನವೀಯ ಅಸ್ಮಿತೆ'ಯ ಹೋರಾಟ.ಇಲ್ಲಿ ಪ್ರತಿಯೊಬ್ಬ ವಚನಕಾರರು ಮತ್ತು ವಚನಕಾರ್ತಿಯರು ಸಹ ತಮ್ಮದೇ ವೈಚಾರಿಕ ಪ್ರಜ್ಞೆಯ ನೆಲೆಯಲ್ಲಿ ಈ ಸಮಾಜಕ್ಕೆ ಅಂಟಿದ್ದ ಮೌಢ್ಯಗಳನ್ನು ತೊಡೆದು ಹಾಕುವಲ್ಲಿ ಬಹಳ ಗಂಭೀರವಾದ ಕೊಡುಗೆ ಇದೆ.ಎಲ್ಲಿಯವರೆಗೆ ಈ ಸಮಾಜ ವೇದ ಸ್ಮೃತಿ, ಶಾಸ್ತ್ರ, ಪುರಾಣಗಳನ್ನು ಸಾರ್ವಕಾಲಿಕ ಬದಲಿಸದ ಪಠ್ಯಗಳಾಗಿ ಇರಿಸಿಕೊಂಡು ತನ್ನದೇ ಸಮಾಜದ ಮತ್ತೊಂದು ಭಾಗವನ್ನು ಶೋಷಣೆಗೊಳಪಡಿಸುತ್ತಿತ್ತೋ ಆ ಇಡೀ ಪಠ್ಯಗಳನ್ನು ಧಿಕ್ಕರಿಸಿ ಜ್ಞಾನದ ಹೊಸ ಮಾದರಿಗಳನ್ನು ಜೀವಪರಧೋರಣೆಗಳನ್ನು ಕಟ್ಟಿಕೊಡುವಲ್ಲಿ ವಚನ ಸಾಹಿತ್ಯ ಒಂದು ಕ್ರಾಂತಿಕಾರಕ ಹೆಜ್ಜೆಯನ್ನಿರಿಸಿತು. ಈ ನಿಟ್ಟಿನಲ್ಲಿ ವಚನ ಸಾಹಿತ್ಯ: ಒಂದು ವೈಚಾರಿ ಪಠ್ಯ ಹೇಗೆ? ಎನ್ನುವುದನ್ನು ತಿಳಿಯಲು ನಾವು ಮೊದಲು ಆ ಪಠ್ಯದ ಆಳದಲ್ಲಿರುವ ಸಮಕಾಲೀನ ಒತ್ತಡಗಳನ್ನು ಮತ್ತು ಅದನ್ನು ಕುರಿತಿದ್ದ ಆಪೇಕ್ಷೆ ನಿರೀಕ್ಷೆಗಳನ್ನು ನಾವು ಅರಿಯಲು ಪ್ರಯತ್ನಿಸಬೇಕು.ಅದರೆ ಅಲ್ಲಿಗೆ ಆ ಪ್ರಯತ್ನ ನಿಲ್ಲಬಾರದು ಏಕೆಂದರೆ ಅಲ್ಲಮನೇ ಹೇಳುವ ಹಾಗೆ 'ಹಿಂದಣ ಹೆಜ್ಜೆಯನರಿಯಲಾಗದೆ ನಿಂದಣ ಹೆಜ್ಜೆಯನರಿಯಲು ಬಾರದು ಎನ್ನುವ ಹಾಗೆ ಆ ಪಠ್ಯದ ಚಾರಿತ್ರಿಕ ಸಂದರ್ಭವನ್ನು ಗ್ರಹಿಸಿ ಭೂತದ ಬೆಳಕಿನಲ್ಲಿ ವರ್ತಮಾನದ ಶೋಧವಾಗಬೇಕು.ಆ ಪಠ್ಯ ಇಂದು ನಮಗೆ ಹೇಗೆ ಪ್ರಸ್ತುತವಾಗುತ್ತದೆ ಎಂಬುದನ್ನು ಅರ್ಥೈಸಿಕೊಳ್ಳಬೇಕು.ಇಂದು ನಮ್ಮ ರಾಜಕೀಯ ಸಾಮಾಜಿಕ ವ್ಯವಸ್ಥೆ ಬದಲಾಗಿರುವಂತೆ ಸಹಜವಾಗಿಯೇ ನಮ್ಮ ಸಾಹಿತ್ಯಿಕ ಸಂವೇದನೆಯೂ ಬದಲಾಗಿದೆ; ಮತ್ತು ಸಾಹಿತ್ಯವನ್ನು ಕುರಿತ ನಮ್ಮ ಅಪೇಕ್ಷೆ ನಿರೀಕ್ಷೆಗಳೂ ಬದಲಾಗಿವೆ.

"ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ್ದು ಪ್ರತ್ಯೇಕ ಅಸ್ತಿತ್ವ; ಒಂದು ಕಾಲಮಾನದಲ್ಲಿ ಸಂಸ್ಕೃತಿಯನ್ನು ಕಟ್ಟಿಕೊಡುವಂಥದು.ಈ ಸಂಸ್ಕೃತಿ ವ್ಯವಸ್ಥೆಯ ಬಿಂಬವಲ್ಲ. ಬದಲಾಗದ ಸಮಾಜವೊಂದನ್ನು ಬದಲಿಸಲು ಹೊರಟ ಜನಂದೋಲನದ ಸಂಸ್ಕೃತಿ"[೧] ವಚನ ಸಾಹಿತ್ಯ ಕಟ್ಟಿಕೊಟ್ಟ ಸಂಸ್ಕೃತಿ ಪರಿಕಲ್ಪನೆ ವೈಚಾರಿಕ ನೆಲೆಗಟ್ಟಿನದು.ಅದು ಮಾನವೀಯ ಸಮಾಜಸ್ತರದ ಮೇಲೆ ರೂಪಗೊಂಡಿರುವಂತದ್ದು.ಬಹುತೇಕ ಜಿಡ್ಡುಗಟ್ಟಿ ನಿಂತು ಹೋಗಿದ್ದ ಬದುಕಿನ ಅಂಧಕಾರತೆಗೆ ಚಲನಶೀಲತೆಯನ್ನು ತಂದುಕೊಟ್ಟಿರುವಂತದ್ದಾಗಿದೆ.ವಚನ ಸಾಹಿತ್ಯ ಎಲ್ಲಾ ಸ್ತರಗಳ ಜನರಿಂದ ರೂಪಗೊಂಡ ಒಂದು ಅನುಭಾವಿಕ ನೆಲೆಯ ಗಟ್ಟಿತನದ ಸಾಚಾತನದ ಸಾಹಿತ್ಯ ಇಲ್ಲಿ ಜೇಡರ ದಾಸಿಮಯ್ಯ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ಕಸಗುಡಿಸುವ ಸತ್ಯಕ್ಕ, ಸೂಳೆ ಸಂಕವ್ವೆಯರ ವರೆಗೂ ತಮ್ಮದೇ ವೈಚಾರಿಕ ಪ್ರಜ್ಞೆಯ ನೆಲೆಯಲ್ಲಿ ಅರಿವಿನ ಹಣತೆಯ ಬೆಳಗಿಸಿದವರು.ಆಗಾಗಿ ಈ ವಚನ ಸಾಹಿತ್ಯದ ಆಂಧೋಲನದ ಪ್ರಕ್ರಿಯೆಯಲ್ಲಿ 'ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರೂ ಅಲ್ಲ' ಆದರೆ ಅದರ ಉದ್ದೇಶ ಮತ್ತು ಗುರಿಗಳು ಮಾತ್ರವೇ ಇಲ್ಲಿ ಮುಖ್ಯವಾಗಿರುತ್ತದೆ.೧೨ನೇ ಶತಮಾನದ ವಚನ ಸಾಹಿತ್ಯ ಕೇವಲ ಒಂದು ಬೌದ್ಧಿಕ ಚಿಂತನೆ ಮಾತ್ರವಾಗಿರದೆ ಅದು ಉತ್ಕಟ ಸಾವಯವ ಅನುಭವದ ಪಠ್ಯವಾಗಿದೆ.ಇಲ್ಲಿನ ಶರಣರಲ್ಲಿ ಎಲ್ಲರದು ಒಂದು ತೂಕವಾದರೆ ಅಲ್ಲಮನದೇ ಇನ್ನೊಂದು ತೂಕ.'ಶೂನ್ಯ ಸಂಪಾದನೆಯಂತೂ ಚರ್ಚೆಯ ಪ್ರಮಾಣವೂ ಅಲ್ಲಮನೆ ಎಂದು ಚಿತ್ರಿಸುತ್ತದೆ.ಅವನ ವ್ಯಕ್ತಿತ್ವ ಏಕಾಂತವಾದದ್ದು.ಬಸವಣ್ಣನಂತೆ ಎಲ್ಲರ ಜೊತೆ ಸಲೀಸಾಗಿ ಬೆರೆಯುವಂತಹ ಸ್ವಭಾವದವನಲ್ಲ ಮತ್ತು ತುಂಬಾ ನಿಷ್ಠುರವಾದಿ.ಅಲ್ಲಮನ ಬದುಕಿನಲ್ಲಿಯೇ ಅವನ ನಿಷ್ಠುರತೆಗೆ ಕಾರಣವಿದ್ದಂತಿದೆ.ಆತನದು ಜ್ಞಾನಮಾರ್ಗವಾದುದರಿಂದ ಸಾಮಾನ್ಯರಿಗೆ ದೂರ ಜ್ಞಾನ ಮಾರ್ಗವೆಂದರೆ ಅಲ್ಲಮನದು ಕೇವಲ ಸಾಂಪ್ರದಾಯಿಕ ಅಥವಾ ಪುಸ್ತಕ ಜ್ಞಾನವೆಂದು

ಗ್ರಹಿಸಲಾಗದು.ಒಟ್ಟು ಪರಂಪರೆಯ ದೋಷಗಳ ಬಗ್ಗೆ.ಸ್ಮೃತಿ ಪುರಾಣಗಳ ಬಗ್ಗೆ ತೀವ್ರ ಅಸಮಧಾನವಿದೆ.

> "ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ಧಿ,
> ಪುರಾಣವೆಂಬುದು ಪುಂಡರಗೊಷ್ಠಿ, ತರ್ಕವೆಂಬುದು ತಗರ ಹೋರಟೆ.
> ಭಕ್ತಿ ಎಂಬುದು ತೋರಿ ಉಂಬ ಲಾಭ.
> ಗುಹೇಶ್ವರನೆಂಬುದು ಮೀರಿದ ಘನವು"[೨]

ಎಂದು ಕಡಾಖಂಡಿವಾಗಿ ವೇದ ಶಾಸ್ತ್ರ ಪುರಾಣ ತರ್ಕಗಳನ್ನೆಲ್ಲ ತರಾಟೆಗೆ ತೆಗೆದುಕೊಂಡು ಅವುಗಳಲ್ಲಿನ ಭ್ರಮಾತ್ಮಕ ಸತ್ಯಗಳನ್ನು, ಪವಾಡದ ಕತೆಗಳನ್ನು ತನ್ನ ತೀಕ್ಷ್ಣ ವಿವೇಚನೆಗಳಿಂದ ಖಂಡಿಸುತ್ತಾನೆ. ಅಲ್ಲಗಳೆಯುತ್ತಾನೆ. ಅಲ್ಲಮ ಪದೇ ಪದೇ ನೀಡುವ ಎಚ್ಚರಿಕೆ ಎಂದರೆ ವೇದ, ಶಾಸ್ತ್ರ ಪುರಾಣ ವಿಧಿ, ಆಚರಣೆಗಳಿಂದ ಆಧ್ಯಾತ್ಮಿಕ ಸಾಧನೆ ಸಿದ್ಧಿಸುವುದಿಲ್ಲ. ತೀರ್ಥಯಾತ್ರೆ, ವ್ರತನೇಮ, ವೇದ-ಮಂತ್ರ ಪಠಣ ಇವೆಲ್ಲ ಯಾಂತ್ರಿಕವಾದವುಗಳು. ಅರಿವಿನ ಅನುಸಂಧಾನವು ಅವರವರ ಪ್ರಜ್ಞೆಯ ನೆಲೆಯಲ್ಲಿ ನಡೆಯಬೇಕು ಎಂದು ತಿಳಿಸುತ್ತಾನೆ ಹೀಗೆ ಅಲ್ಲಮನ ವಿಚಾರಗಳು ನಮ್ಮನ್ನು ಅವನು ಏರಿದ ಎತ್ತರಕ್ಕೆ ಇಳಿದ ಆಳಕ್ಕೆ ತಲುಪಿಸದೆ ನಮ್ಮನ್ನು ವಿಸ್ಮಿರನ್ನಾಗಿ ಮಾಡುತ್ತವೆ.

ಪರಂಪರೆಯು ಆತನನ್ನು ಸಾಕ್ಷಾತ್ ಶಿವನ ಜೊತೆ ಸಮೀಕರಿಸಿರುವುದೇ ಆತನ ವ್ಯಕ್ತಿತ್ವದ ಬಗ್ಗೆ ಕಾಲಾನುಕಾಲಕ್ಕೆ ಜನರು ಚಕಿತರಾದ ರೀತಿಯ್ನು ಸೂಚಿಸುತ್ತದೆ.ಅಲ್ಲಮನೆಂಬ ಹೆಸರೇ ಏನೂ ಅಲ್ಲದುದನ್ನು ಸೂಚಿಸುತ್ತದೆ."ಬಯಲು ಬಯಲನೆ ಭಿತ್ತಿ, ಬಯಲು ಬಯಲನೆ ಬೆಳೆದು. ಬಯಲು ಬಯಲಾಗಿ ಬಯಲಾಯಿತ್ತಯ್ಯ, ಬಯಲ ಜೀವನ, ಬಯಲ ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯ ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ" 'ಬಯಲ ಶಬ್ದವಿಡಿದು' ಮುದ್ದಳಿಗನಾದ ಅಲ್ಲಮನ 'ಬಯಲು ದುಂದುಭಿ'ಯ ವಚನದಲ್ಲಿ ನಾವು ಏನೋ ಹಿಡಿಯಲು ಹೋಗಿ ಏನು ಇಲ್ಲದವರಾಗಿ ಕೊನೆಗೆ ಏನೋ ಪಡೆದುಕೊಂಡಿರುತ್ತೇವೆ. ಅದು ಬೇರೆನೋ ಆಗಿರದೆ ನಮ್ಮ ಅರಿವಿನ ವೈಚಾರಿಕ ಬೆಳಕೆ ಆಗಿರುತ್ತದೆ. ಇದೇ ಅಲ್ಲಮನ ವಚನಕ್ಕೆ ಅವನ ವೈಚಾರಿಕ ಪ್ರಜ್ಞೆಯ ತೀಕ್ಷ್ಣತೆಗೆ ಸಾಕ್ಷಿಯಾಗಿ ನಮ್ಮೆದುರು ನಿಲ್ಲುತ್ತದೆ.

ಅಲ್ಲಮನ ವ್ಯಕ್ತಿತ್ವ ಏಕಾಂತ ಜ್ಞಾನ ಸಿದ್ಧಿಯ ಮಾರ್ಗವಾಗಿದ್ದರೆ, ಬಸವಣ್ಣನದು ಇದಕ್ಕೆ ತೀರಾ ಭಿನ್ನವಾದ ಸಾಮುದಾಯಿಕ ಜ್ಞಾನಮಾರ್ಗ.ಜಾತಿ, ಅಸಮಾನತೆ ನಮ್ಮ ಸಮಾಜದ ದೊಡ್ಡ ಪಿಡುಗಾದ್ದರಿಂದ ಅದರ ವಿಶ್ಲೇಷಣೆಗೆ ತೊಡಗುವ ಬಸವಣ್ಣ ಅತ್ಯಂತ ವಿಚಾರಶೀಲ ಮಾರ್ಗ ಹಿಡಿಯುತ್ತಾನೆ. "ಬಸವಣ್ಣ ಜಾತಿಗಳಿಗೆ ವೃತಿ ವಿವಿಧತೆಯೇ ಕಾರಣವಾಗಿರುವುದೆಂದು ಹೇಳಿ. ಈ ವರ್ಗೀಕರಣವು ಮಾನವ ನಿರ್ಮಿತವೇ ಹೊರತು ಪ್ರಾಕೃತಿಕವಲ್ಲದ್ದೆಂದು ತರ್ಕಿಸುತ್ತಾನೆ. ತಾರತಮ್ಯ ನಿವಾರಣೆಗೆ ವೃತ್ತಿಗಳ ಸಮಾನತೆಯೇ ಮದ್ದು ಎಂದು ಭಾವಿಸಿ 'ಕಾಯಕ' ತತ್ವದ ಮೂಲಕ ವೃತ್ತಿ ತಾರತಮ್ಯದ ನಿವಾರಣೆಗೆ ಪ್ರಯತ್ನಿಸುತ್ತಾರೆ"[೩]

ಪ್ರತಿಯೊಬ್ಬ ಮನುಷ್ಯನು ತನ್ನ ಜೀವನ ನಿರ್ವಹಣೆಗೆ ಯಾವುದಾದರೊಂದು ವೃತ್ತಿ ಮಾಡುವುದು ಅನಿವಾರ್ಯ.ಆದರೆ ಕರ್ಮ ವಿಭಜನೆಯ ಹೆಸರಿನಲ್ಲಿ ಕಾಯಕ ಜೀವಿಗಳನ್ನು ಗುರುತಿಸಿ ಕಾಲಾಂತರದಲ್ಲಿ ಅವೇ ವರ್ಣ, ಜಾತಿ ಸೂಚಕಗಳಾಗಿ ಮಾರ್ಪಟ್ಟದ್ದು ದುರಂತದ ವಿಷಯವಾಗಿದೆ. "ಬುದ್ಧಿ ಮತ್ತು ಬಲದಿಂದ" ಜೀವಿಸುವ ಒಂದು ವರ್ಗ ಉತ್ತಮ ಜಾತಿಗಳಾಗಿ ವಿಂಗಡನೆಯಾಯಿತು.ಕೆಲಸ ಮಾಡುವವರ ಶ್ರಮದ ಫಲವನ್ನು ಈ ವರ್ಗ ಅನುಭೋಗಿಸುವ ಪರಂಪರೆ ೧೨ನೇ ಶತಮಾನಕ್ಕಾಗಲೇ ವ್ಯಾಪಕವಾಗಿ ಹರಡಿತ್ತು.ಈ ಅಸಮಾನತೆಯನ್ನು ಬಸವಣ್ಣ ತೀವ್ರವಾಗಿ ಖಂಡಿಸುತ್ತಾನೆ.

ವೃತ್ತಿ ಮತ್ತು ಜಾತಿ ಪರಸ್ಪರ ಇವೆರಡಕ್ಕೂ ಯಾವುದೇ ರೀತಿಯ ಸಂಬಂಧಗಳಿಲ್ಲ ಎಂಬುದನ್ನು ಹಾಗೂ ಕಾಯಕದ ನಿಜ ಸ್ವರೂಪವನ್ನು ಬಸವಣ್ಣನಲ್ಲದೆ ಮಡಿವಾಳ ಮಾಚಯ್ಯ ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಪುಣ್ಯಸ್ತ್ರೀ ಕಾಳವ್ವೆಯಂತವರು ತಮ್ಮ ತಮ್ಮ ನುಡಿ ಭಾಷೆಗಳ ಮುಖಾಂತರವೇ ಅದಕ್ಕೆ ಉತ್ತರಿಸುತ್ತಾರೆ. "ತನುಮನಧನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನ ತಂದು ಭಕ್ತನಾದೆನೆಂದು ತೋರದಿರು ಅವ ಪರಧನ ಚೋರ ಪಾಪಿ" ಎಂದು ವಾಮಮಾರ್ಗದಲ್ಲಿ ಹಣಮಾಡುವುದನ್ನು ಮಡಿವಾಳ ಮಾಚಯ್ಯ ವಿರೋಧಿಸುತ್ತಾನೆ. "ಸತ್ಯಶುದ್ಧ ಕಾಯಕದಲ್ಲಿ ಬಂದ ದ್ರವ್ಯದಿಂದಲ್ಲದೆ ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮದಾಸೆಗೆ ದ್ರವ್ಯವ ಹಿಡಿದರೆ ತಾನು ಮಾಡಿದ್ದಲ್ಲ ವ್ಯರ್ಥ" ಎಂಬ ನುಲಿಯ ಚಂದಯ್ಯನ ನಂಬಿಕೆ ಎಲ್ಲಾ ವೃತ್ತಿಗಳಲ್ಲೂ ಪರಿಶುದ್ಧತೆ ಕಾಪಾಡಿಕೊಳ್ಳಬೇಕು ಎಂಬುದನ್ನು ಒತ್ತಿ ಹೇಳಿದ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ "ಸತ್ಯ ಶುದ್ಧ ಕಾಯಕವಿಲ್ಲದುದು ಕಾಯಕವಲ್ಲ" ಎಂದು ಸಾರಿದ್ದಾಳೆ.

ಬಸವಣ್ಣ ಕಾಯಕ ಜೀವಿಗಳ ನಿಲುವನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತಾ "ಹೊನ್ನಿನೊಳಗೊಂದರೆಯ ಸೀರೆಯೊಳಗೊಂದೆಳೆಯ ಇಂದಿಗೆ ನಾಳಿಂಗೆ ಬೇಂಕೆಂದನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ" ಎನ್ನುವ ಮಾತು ಹಣ ಸಂಗ್ರಹ ನಮ್ಮ ಅಗತ್ಯೆತೆಗಳಿಗನುಗುಣವಾಗಿರಬೇಕೆ ಹೊರತು ದುರಾಸೆಯ ಸಂಗ್ರಹಣೆಯಾಗಿರಬಾರದು ಮತ್ತು ದುರ್ಮಾರ್ಗದಿಂದ ಗಳಿಸಿರಬಾರದು ಎಂಬುದು ಕಾಲದ ಹಂಗು ಮೀರಿ ಇಂದಿನ ಬಂಡವಾಳ ಶಾಹಿಗಳಿಗೆ ಅನ್ವಯಿಸುವಂತದ್ದಾಗಿದೆ. ಬಸವಣ್ಣ ವನಕಾರರ ನೇತಾರನಾಗಿ ತಾನು ಕಟ್ಟ ಬಯಸಿದ ಸಮ ಸಮಾಜದ ಆಶಯಗಳು ಗೊತ್ತು ಗುರಿಗಳೇನೆಂಬುದನ್ನು ತನ್ನ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾನೆ. ತಾನು ಕಟ್ಟುವ ಸಮಾಜ ಮೇಲು ಕೀಳುಗಳಿಲ್ಲದ ಸಮಾನತೆಯ ಸಮಾಜವಾದ್ದರಿಂದ ಅ ಸಮಾಜಕ್ಕೆ ವಿವಿಧ ವರ್ಗದ ದೇವರುಗಳ, ದೇವಾಲಯಗಳ ಅವಶ್ಯ ಇಲ್ಲವೆಂದು ಹೇಳುತ್ತಾನೆ

> "ಉಳ್ಳವರು ಶಿವಾಲಯ ಮಾಡುವರು;
> ನಾನೇನು ಮಾಡುವೆ, ಬಡವನಯ್ಯಾ
> ಎನ್ನ ಕಾಲೇ ಕಂಬ, ದೇಹವೆ ದೇಗುಲ,
> ಶಿರ ಹೊನ್ನ ಕಳಶವಯ್ಯಾ"[೪]

ಎಂದು ದೇವರು ದೇವಾಲಯ ಈ ಎಲ್ಲ ವಿಷಯದಲ್ಲಿ ವೈದಿಕ ಪರಂಪರೆ ಈ ವರೆಗೆ ಕಟ್ಟಿದ ಎಲ್ಲ ಸಂಪ್ರದಾಯಗಳನ್ನು ಭಂಜಿಸಿ ದೇಹವನ್ನೇ ದೇವಾಲಯವಾಗಿಸಿ, ಇಷ್ಟಲಿಂಗವನ್ನು ಧರಿಸಿದವನನ್ನು ಶಿವಭಕ್ತನೆಂದು ಕರೆದು.ತನ್ನದೇ ವೈಚಾರಿಕ ನೆಲೆಯಲ್ಲಿ "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಸಾರಿ ಧರ್ಮದ ಸ್ಥಾವರ ಪ್ರತೀಕಗಳಾದ ಭವ್ಯವಾದ ಗುಡಿ-ಗೋಪುರಗಳು, ಯಾಂತ್ರಿಕ ಆಚರಣೆಗಳು ಇವೆಲ್ಲವನ್ನು ತಿರಸ್ಕರಿಸಿ, ಜಂಗಮ ತತ್ವವನ್ನು ಪ್ರತಿಪಾದಿಸುತ್ತಾರೆ. ಆದರೆ ಬಸವಣ್ಣನವರು ಯಾವುದನ್ನು ತುಂಬಾ ತೀವ್ರವಾಗಿ ವಿರೋಧಿಸಿದ್ದರು ಅದೇ ಕೇವಲ ೫೦-೬೦ ವರ್ಷಗಳ ಅವಧಿಯಲ್ಲಿಯೇ ಅವರನ್ನೇ

ಕೇಂದ್ರವಾಗಿರಿಸಿಕೊಂಡು ಸ್ಥಾವರ ಚಿಂತನೆ ಬೇರೂರಲು ಪ್ರಾರಂಭಿಸಿತು. ಇದು ಈಗಿನ ವರ್ತಮಾನ ಪರಿಸ್ಥಿತಿಗೂ ಹೊರತಾಗಿಲ್ಲ. ನಾವು ಅವರ ತತ್ವಚಿಂತನೆಗಳ ಪ್ರಯೋಗಶೀಲತೆಯಲ್ಲಿ ಹಿಂದೆ ಇದ್ದು ಅವರ ದೊಡ್ಡ ದೊಡ್ಡ ಏಕತಾಶಿಲಾ ಮೂರ್ತಿಗಳ ಪ್ರತಿಷ್ಠಾಪನೆ, ಭವ್ಯವಾದ ಮಂದಿರಗಳ ನಿರ್ಮಾಣದ ಕಾರ್ಯದಲ್ಲಿ ತೊಡಗಿದ್ದೇವೆ. ಪ್ರಸ್ತುತ ಈ ಎಲ್ಲ–ಕಾರ್ಯಗಳಿಗೂ ಪ್ರಭುತ್ವದ ಮುದ್ರೆಯೂ ದೊರೆಯುತ್ತಿರುವುದು ಬಸವಣ್ಣನವರು ಕಟ್ಟಲು ಬಯಸಿದ ಮೌಢ್ಯಗಳಿಲ್ಲದ ವೈಚಾರಿಕವಾದ ಸಮಸಮಾಜದ ಕನಸಿನ ದುರಂತದ ಪ್ರತೀಕದಂತೆ ಕಾಣುತ್ತದೆ.

ಬಸವಣ್ಣನ ಸಮಕಾಲೀನನೆಂದು ಭಾವಿಸಬಹುದಾದ ಅಂಬಿಗರ ಚೌಡಯ್ಯ ಬಹಳ ಪ್ರಖರವಾದ ವ್ಯಕ್ತಿತ್ವದವನು. ಅವನ ಎಲ್ಲ ವಚನಗಳು ವೈಚಾರಿಕತೆ ಹಾಗೂ ತೀಕ್ಷ್ಣ ಮಾತುಗಳಿಂದ ತುಂಬಿ ಹೋಗಿವೆ. ಇವನ ಕಠೋರವಾದ ನಿಷ್ಠೆ ಮತ್ತು ಮಾತುಗಳು ಆ ಕಾಲಘಟ್ಟದ ಎಷ್ಟೋ ಜನ ವೀರಶೈವ ಕವಿಗಳಿಗೆ ನುಂಗಲಾರದ ತುತ್ತಾಗಿದ್ದು, ಆ ಕಾರಣಕ್ಕಾಗಿಯೇ ಈ ಕವಿಗಳು ಅಂಬಿಗರ ಚೌಡಯ್ಯನಂತಹ ವಚನಕಾರರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಸಿದ್ಧನಂಜೇಶ ಘನಲಿಂಗದೇವ ಮತ್ತು ಷಡಕ್ಷರ ದೇವನಂತವರು ಇವನನ್ನು ನೆನೆಯುತ್ತಾರೆ. ಅಂಬಿಗರ ಚೌಡಯ್ಯನು, ದೇವಾಲಯಗಳಲ್ಲಿ ಮಠಗಳನ್ನು ಕಟ್ಟಿಕೊಂಡು ದೇವರ ಅವತಾರವೆಂದೂ ಅವನ ಪ್ರತಿನಿಧಿಗಳೆಂದೂ ಹೇಳಿಕೊಳ್ಳುತ್ತಿದ್ದವರ ಹುಳುಕುಗಳನ್ನು ಹೊರಕ್ಕೆಳೆಯುತ್ತಿದ್ದನು.ಈ ಯತಿಗಳ ಡಾಂಭಿಕತನ, ಕಪಟತನಗಳನ್ನು ಸಮಾಜದೆದುರು ಟೀಕೆಗೊಳಪಡಿಸುತ್ತಿದ್ದನು.ವಚನಕಾರರಲ್ಲಿ ಬೇರೆ ಯಾರಿಗೂ ಈ ಧೈರ್ಯವಿರಲಿಲ್ಲ. ಆದ್ದರಿಂದಲೇ ಅವನು ತನ್ನನ್ನು 'ನಿಜಶರಣ'ಎಂದು ಕರೆದುಕೊಳ್ಳುತ್ತಾನೆ.

ಅವನ ತೀಕ್ಷ್ಣ ದೃಷ್ಟಿ ಮಠಪತಿಗಳತ್ತ ಹರಿದಂತೆಯೇ ವೇದಪುರಾಣಗಳನ್ನು ಹೇಳಿಕೊಂಡು ಬದುಕುತ್ತಿದ್ದ ವೈದಿಕರತ್ತಲೂ ಹರಿದಿದೆ.ವೇದ ಓದಿದವರ ಮನೆಯ ಊಟವನ್ನು ಶಿವಭಕ್ತರ ಮನೆಯ ನಾಯಿ ಕೂಡ ಮೂಸಿ ನೋಡದು ಎನ್ನುವ ಹಟ ಅವನದಾಗಿದೆ.ಅಲ್ಲಮ ಬಸವರಂತೆ ಇವನು ಸಹ ಸ್ಥಾವರ ವಿರೋಧಿಯಾಗಿದ್ದು 'ಸ್ಥಾವರಂಗಳ ಪೂಜಿಸೆನು' ಎಂದು ಪ್ರತಿಜ್ಞೆ ಮಾಡಿದ್ದಾನೆ.

"ಕಲ್ಲು ದೇವರ ಪೂಜೆಯ ಮಾಡಿ
ಕಲಿಯುಗದ ಕತ್ತೆಗಳಾಗಿ ಹುಟ್ಟಿದರು
ಮಣ್ಣ ದೇವರ ಪೂಜಿಸಿ ಮಾನ ಹೀನರಾದರು
ಮರನ ದೇವರೆಂದು ಪೂಜಿಸಿ ಮಣ್ಣ ಕೂಡಿದರು
ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು"

ಅಂಬಿಗರ ಚೌಡಯ್ಯನ ಈ ವಚನ ದೇವರ ವಾಸ್ತವಿಕ ಸ್ವರೂಪದ ಬಗ್ಗೆ ಮಾತನಾಡುತ್ತಲೆ ಅದರ ಗ್ರಹಿಕೆಯಲ್ಲಿನ ಮೌಢ್ಯಗಳನ್ನು ಕಠೋರವಾಗಿಯೇ ಖಂಡಿಸುತ್ತಾನೆ. ಕಲ್ಲು, ಮಣ್ಣು, ಮರ ಇವೆಲ್ಲವುಗಳಿಂದ ಮಾಡಲ್ಪಟ್ಟ ಯಾವುದೇ ಇಷ್ಟದೇವತಾ ವಿಗ್ರಹಗಳಲ್ಲಿ ದೇವರ ಅಸ್ಥಿತ್ವವಿಲ್ಲ. ಅದರ ಅಸ್ಥಿತ್ವವೇನಿದ್ದರೂ ಇಷ್ಟಲಿಂಗದ ಸಾಂಕೇತಿಕತೆಯ 'ಅರಿವಿನ ಬೆಳಕೆ' ನಮ್ಮ ದೇವರು ಎಂದು ಹೇಳುತ್ತಾನೆ.

ಸ್ಥಾವರ ಭಕ್ತಿ, ಮಠ, ಯತಿಗಳನ್ನು ಕುರಿತು ಮಾತನಾಡುವ ಅಂಬಿಗರ ಚೌಡಯ್ಯ ಕುಲ, ಹೊಲೆಯ ಈ ವಿಷಯಗಳನ್ನು ಎತ್ತಿಕೊಂಡು ತುಂಬಾ ವೈಚಾರಿಕವಾದ ಪ್ರಶ್ನೆಗಳನ್ನು ಎತ್ತುತ್ತಾನೆ. ಸಮಾಜದ ತಾರತಮ್ಯವನ್ನು ಕುರಿತು ಮಾತನಾಡುತ್ತಾನೆ. "ಕುರಿಕೋಳಿ ತಿನ್ನುವವರು ಊರೊಳಗಿದ್ದರೆ, ಗೋವನ್ನು ತಿನ್ನುವವರು ಊರ ಹೊರಗೆ ಇರಬೇಕು ಯಾಕೆ ಎಂದು ಪ್ರಶ್ನಿಸುವುದಲ್ಲದೆ, ಆ ಹಸುವಿನ ಚರ್ಮದಿಂದ ಹರಿಗೋಲು, ಬೊಕ್ಕಣ, ಸಿದಿಕೆ ಬಾರುಕೋಲು, ಪಾದರಕ್ಷೆ, ಮದ್ದಳೆ, ಬುದ್ದಲಿಕೆ ಇವೆಲ್ಲವೂ ಮಾಡುತ್ತಾರೆ. ಅವನ್ನು ತೆಗೆದುಕೊಂಡು ಬಳಸಿ, ಅದನ್ನು ತಯಾರು ಮಾಡಿದವರನ್ನು ಮಾತ್ರ ಹೊರಗಿರಿ ಎಂದರೆ ಹೇಗೆ?"[೫] ಅದಕ್ಕೆ ಅವನು 'ಕುಲಹಲವಾದಡೇನು, ಉತ್ಪತ್ತಿಸ್ಥಿತಿಯ ಒಂದೇ ಭೇದ' ಎಂದಿರುವುದಲ್ಲದೆ ವಾಸ್ತವವಾಗಿ ಹೊಲೆಯನೆಂದರೆ ಯಾರು ಎನ್ನುವ ಬಗ್ಗೆ ಅಂಬಿಗರ ಚೌಡಯ್ಯ ಸ್ಪಷ್ಟವಾಗಿ ತಿಳಿಸುತ್ತಾನೆ. ತಾಯಿಗೆ ಬೈದವನು, ತಂದೆಗೆ ಎದುರು ಬಿದ್ದವನು, ದಾನಕ್ಕೆ ಅಡ್ಡಬಂದವನು, ಸುಳ್ಳು ಹೇಳುವವನು ಇವರೆಲ್ಲ ನಿಜವಾಗಿ ಹೊಲೆಯರು, ಇಂತಹ ಹೊಲೆಯರು ಊರು ತುಂಬ ಇರುವಾಗ ನನ್ನ ಕುಲ ಹೆಚ್ಚು, ನನ್ನ ಕುಲಹೆಚ್ಚು ಎಂದು ಬಡಿದಾಡುವರು ನಾಯಿಗಳು ಎನ್ನುತ್ತಾನೆ.

ಚೌಡಯ್ಯನ ವಿಮರ್ಶಾತ್ಮಕ ತೀಕ್ಷ್ಣ ಬುದ್ಧಿ ಇಷ್ಟಕ್ಕೆ ನಿಲ್ಲದೆ ಅಕ್ಕಮಹಾದೇವಿ ಬಸವಣ್ಣನವರಂತಹ 'ಶರಣಸತಿ ಪತಿ ಲಿಂಗಪತಿ'ಯಂತಹ ತತ್ವಗಳನ್ನೇ ಹಿಡಿದು ಅಲ್ಲಾಡಿಸಿದೆ.ಆ ತತ್ವವೆಂಬುದು ಮೊದಲಿಗೆ ಮೋಸ ಶರಣ ಹೆಣ್ಣಾದ ಪರಿ ಇನ್ನೆಂತು ಲಿಂಗ ಗಂಡಾದ ಪರಿ ಇನ್ನೆಂತು ನೀರು ನೀರು ಕೂಡಿ ಬೆರೆಸಿದಲ್ಲಿ ಭೇದಿಸಿ ಬೇರೆ ಮಾಡಬಹುದೇ ಎಂದು ನಡುವೆ ಸುಳಿವ ಆತ್ಮಕ್ಕೆ ಹೆಣ್ಣು ಗಂಡಿನ ಭೇದವೇ ಇಲ್ಲವೆಂದು ಸ್ಪಷ್ಟಪಡಿಸುತ್ತಾನೆ.

ಅಂಬಿಗರ ಚೌಡಯ್ಯ ವಚನಕಾರರಲ್ಲಿ ಅಲ್ಲಮನಷ್ಟೇ ಪ್ರಖರವಾದ ಚಿಂತಕ.ಆದರೂ ಅವನಿಗೆ ಸಿಗಬೇಕಾದಷ್ಟು ಸ್ಥಾನಮಾನ ಸಿಗದೇ ಇರುವುದು ಅವನ ನೇರ ನಿಷ್ಠುರದ ನುಡಿಗಳು.ಕಾರಣ ಅವನ ಪ್ರಧಾನ ಚಿಂತನೆ ಸತ್ಯದ ಅನ್ವೇಷಣೆ. ಆ ಕಾರಣಕ್ಕಾಗಿಯೇ ಅವನು ಆ ಕಾಲಘಟ್ಟದ ವೀರಶೈವ ಕವಿಗಳಾದ ಹರಿಹರ, ರಾಘವಾಂಕ, ಭೀಮಕವಿ, ಲಕ್ಕಣ ದಂಡೇಶ, ವಿರೂಪಾಕ್ಷ ಪಂಡಿತರಂತಹ ಕವಿಗಳಿಗೆ ಮೂರ್ತಿಭಂಜಕನಾಗಿ ಕಂಡಿರುವುದರಿಂದಲೇ ಏನೋ ಆ ಕವಿಗಳು ತಮ್ಮೆಲ್ಲ ಕೃತಿಗಳಲ್ಲಿ ಎಲ್ಲಿಯೂ ಅಂಬಿಗರ ಚೌಡಯ್ಯನಂತಹ ವಾಸ್ತವವಾದಿ ಚಿಂತಕನ ಹೆಸರನ್ನೇ ಪ್ರಸ್ತಾಪ ಮಾಡುವುದಿಲ್ಲ. ಈ ಪ್ರಕ್ರಿಯೆಯನ್ನು ನೋಡಿದಾಗ ಇದು ನಮ್ಮ ಮಹಾಕವಿಗಳಿಗಿರುವಂತಹ ಒಂದು ಮಿತಿಯೂ ಎಂದೇ ಗ್ರಹಿಸಬೇಕಾಗುತ್ತದೆ. ಆದರೆ ಅಂಬಿಗರ ಚೌಡಯ್ಯ ಮಾತ್ರ 'ನಿನ್ನಲ್ಲಿ ನೀ ತಿಳಿದು ನೋಡಾ, ಜಗವು ನಿನ್ನೊಳಗೆ' ಎಂಬ ತಿಳಿವಿನ ಮಹತ್ವಕ್ಕೆ ವಾಸ್ತವದ ಕಡೆಗೆ ಮುಖಮಾಡಿದವನು ಎಂಬುದು ಮುಚ್ಚಿಡಲಾರದ ಸತ್ಯವಾಗಿದೆ.

ವಚನ ಚಳುವಳಿಯು ಒಂದು ಸಮಷ್ಟಿ ಪ್ರಜ್ಞೆಯ ನೆಲೆಯಲ್ಲಿ ರೂಪಗೊಂಡಿದ್ದು, ಇದರಲ್ಲಿ ಅನೇಕ ವಚನಕಾರ್ತಿಯರ ಪಾತ್ರವೂ ಮುಖ್ಯವಾಗುತ್ತದೆ.ಅಕ್ಕಮಹಾದೇವಿ.ಸತ್ಯಕ್ಕನಂತವರ ವಚನಗಳು ಸ್ತ್ರೀ ಚೈತನ್ಯದ ಧ್ವನಿಯಿಂದಲೇ ಹುಟ್ಟಿಕೊಂಡು ಸಮಷ್ಠಿಯ ನೆಲೆಯಲ್ಲಿ ತಮ್ಮ ಪೂರ್ಣತೆಯನ್ನು ಕಂಡುಕೊಳ್ಳುತ್ತವೆ.

ವಚನಕಾರ್ತಿಯರಲ್ಲಿ ಮಹಾದೇವಿಯಕ್ಕನ ಸ್ಥಾನ ಮೊದಲನೆಯದು.ಅವಳ ಜೀವನಕ್ಕೆ ಸಂಬಂಧಿಸಿದಂತೆ ಅನೇಕ ತೊಡಕುಗಳಿವೆ. ಕೆಲವರು ಹೇಳುವುದಕ್ಕೆ ಭಿನ್ನವಾಗಿ ಮತ್ತೆ ಕೆಲವರು ಹೇಳುತ್ತಾರೆ.ಆದರೆ ಅಕ್ಕಮಹಾದೇವಿಯ ವಚನಗಳ ಅಭಿವ್ಯಕ್ತಿಯ ಕ್ರಮವನ್ನು ಗಮನಿಸಿದಾಗ ಅವಳ ಧ್ವನಿ 'ಹೆಣ್ಣನ್ನು ದೇಹ ಪ್ರಧಾನವಾಗಿ ನೋಡಿದ ಈ ಸಮಾಜದ ಪುರುಷ ಪ್ರಧಾನ ವ್ಯವಸ್ಥೆಗೆ ಹೂಡಿದ ಸ್ತ್ರೀಪರ ಬಂಡಾಯ ಧ್ವನಿಯಾಗಿದೆ. ಹನ್ನೆರಡನೆಯ ಶತಮಾನದ ವಚನ ಚಳುವಳಿಯು ಅಂದಿನ ಸ್ತ್ರೀಯರಿಗೆ ತಂದಿದ್ದ ಆತ್ಮ ವಿಶ್ವಾಸದ ಪ್ರತೀಕವಾಗಿ

ಅಕ್ಕಮಹಾದೇವಿಯು ಕಾಣಿಸಿಕೊಳ್ಳುತ್ತಾಳೆ.

ಅಕ್ಕಮಹಾದೇವಿಯು ಹೆಣ್ಣಿನ ಸ್ವಾಭಿಮಾನ – ಸ್ವಾತಂತ್ರ್ಯಾಪೇಕ್ಷಗಳ ಪ್ರತೀಕವಾಗಿದ್ದಾಳೆ.ಸಮಾಜದಲ್ಲಿ ಹೆಣ್ಣಿನ ಮೇಲೆ ಹಿಡಿತವನ್ನು ಸಾಧಿಸುವ ಗಂಡಿನ ದರ್ಪಕ್ಕೆ ಅವಳು ತೋರಿದ ಪ್ರತಿಭಟನೆ ಅನನ್ಯವಾದುದಾಗಿದೆ.ದೇಹವನ್ನೆ ಪ್ರಧಾನವಾಗಿ ನೋಡಿದ ಈ ಪುರಷ ಸಮಾಜದ ಬಗ್ಗೆ ಅವಳಿಗೆ ಅಸಹ್ಯವಿದೆ, ಆಕ್ರೋಶವಿದೆ. ಯಾವ ಸಮಾಜ ದೇಹವನ್ನು ಪ್ರಧಾನವಾಗಿ ನೋಡಿತ್ತೋ ಆ ಸಮಾಜದ ಎದುರಿನಲ್ಲೇ ಅಕ್ಕಮಹಾದೇವಿ ದೇಹದ ಅನಿಶ್ಚಿತತೆಯ ಬಗ್ಗೆ ವೈಚಾರಿಕವಾಗಿ ಮಾತನಾಡುತ್ತಾಳೆ.

"ಅಮೇಧ್ಯದ ಮಡಕೆ, ಮೂತ್ರದ ಕುಡಿಕೆ;
ಎಲುವಿನ ತಡಿಕೆ ಕೀವಿನ ಹಡಿಕೆ!
ಸುಡಲೀ ದೇಹವ!
ಒಡಲುವಿಡಿದು ಕೆಡದಿರು
ಚೆನ್ನಮಲ್ಲಿಕಾರ್ಜುನನರಿ ಮರುಳೇ"[೬]

ಎಂದು ಹೇಳಿ ಇಡೀ ಈ ಲೌಕಿಕ ಬದುಕಿನಲ್ಲಿ ದೇಹದ ಪಾತ್ರವು ಎಷ್ಟು ಕ್ಷುಲ್ಲಕವಾದುದೆಂದು ಹೇಳುತ್ತಾ ಅದರೊಳಗಿನ ಚೈತನ್ಯವೊಂದೇ ಸ್ಥಿರವಾಗಿರುವುದು ಎಂದು ತಿಳಿಸುತ್ತಾಳೆ.ಹೀಗೆ ಅಕ್ಕಮಹಾದೇವಿ ಹೇಳಬೇಕಾದರೆ ಅವಳು ಭವಿಯಾದ ಕೌಶಿಕನನ್ನು ಧಿಕ್ಕರಿಸಿ ಒಂಟಿಯಾಗಿ ಬದುಕಬೇಕಾದಾಗ ಅನೇಕ ಸಮಸ್ಯೆಗಳನ್ನೆದುರಿಸಿರುವುದು ಅಸಂಭವವಲ್ಲ. ಆದರೆ ಆಕೆ ಇದ್ದ ಗಂಡನನ್ನು ತಿರಸ್ಕರಿಸಿದರೂ ಚೆನ್ನಮಲ್ಲಿಕಾರ್ಜುನನ್ನು ಗಂಡನೆಂದು ಅಂಗೀಕರಿಸಿದ್ದು ಗಂಡಿನ ದರ್ಪದ ಈ ಸಮಾಜದಿಂದ ಆಕೆಗೆ ರಕ್ಷಣೆಯೊದಗಿಸಿರಬೇಕು.ಹಾಗೆಯೇ ಅವಳು ಧಿಕ್ಕರಿಸಿದ್ದು ಭವಿಯಾದ ಗಂಡನಾದ್ದರಿಂದ ಭಕ್ತ ಸಂಕುಲ ಅವಳನ್ನು ಗೌರವಿಸಿತು.ವೇದಶಾಸ್ತ್ರಗಳ ವಿಚಾರದಲ್ಲಿ ಅಕ್ಕಮಹಾದೇವಿ "ಓದಿ ಓದಿ ವೇದ ವಾದಕ್ಕಿಕ್ಕಿತು ಕೇಳಿ ಕೇಳಿತಾ ಶಾಸ್ತ್ರ ಸಂದೇಹಕ್ಕಿತು ಎಂದು ನಿರಾಕರಿಸಿ ಅದನ್ನು ಮತ್ತು ಸ್ಪಷ್ಟಗೊಳಿಸುವಂತೆ, ವೇದಶಾಸ್ತ್ರ ಆಗಮಪುರಾಣಗಳೆಲ್ಲವು ಕೊಟ್ಟಣದವ ಕುಟ್ಟಿದ ನುಚ್ಚು ತೌಡುಕಾಣಿಭೋ ಅವು ವ್ಯರ್ಥ ಕಸರತ್ತುಗಳೆಂದು ತಿಳಿಸುತ್ತಾಳೆ.

ಅಕ್ಕಮಹಾದೇವಿಯ ಜೊತೆಗೆ ಹೆಸರಿಸಬೇಕಾದ ಮತ್ತೊಬ್ಬ ಪ್ರಮುಖ ವಚನಕಾರ್ತಿ ಎಂದರೆ ಕಸಗುಡಿಸುವ ಕಾಯಕದ ಸತ್ಯಕ್ಕ. ಈಡೀ ವಚನ ಚಳುವಳಿಯ ಯಶಸ್ಸು ಮತ್ತು ವೈಚಾರಿಕ ಪ್ರಜ್ಞೆ ಇರುವುದೇ ಕಸಗುಡಿಸುವ ಸತ್ಯಕ್ಕನಂತವರು ಮುಖ್ಯವಾಹಿನಿಗೆ ಬಂದು ಸಮಾಜದ ಅನೇಕ ಮೌಢ್ಯಗಳ ಬಗ್ಗೆ ಮಾತನಾಡುವುದು.

ಅರ್ಚನೆ ಪೂಜನೆ ನೇಮವಲ್ಲ;
ಮಂತ್ರ ತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ;
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ[೭]

ಇವಳದು ಏಕದೇವತಾ ನಿಷ್ಠೆ. ನಾನಾವಿಧದ ಅರ್ಚನೆ, ಪೂಜೆಗಳೆಲ್ಲ ನೇಮವಾಗುವುದಿಲ್ಲ. ಕೇವಲ ತುಟಿಯಿಂದ ಮಂತ್ರಗಳ ಪಟನೆಯಾದರೆ ದೇವರ ನೇಮವಾಗುವುದಿಲ್ಲ. ಅನ್ಯದೈವಗಳಿಗೆರಗದೆ ಒಬ್ಬನೇ ದೇವನಿಗೆ ನಿಷ್ಠೆಯಿಂದ ಇರುವ ಬಗ್ಗೆ ಸತ್ಯಕ್ಕ ಮಾತನಾಡುತ್ತಾಳೆ ಹೆಣ್ಣು–ಗಂಡಿನ ವಿಚಾರದಲ್ಲೂ ಅವಳ ನಿಲುವು ಭಿನ್ನವಾದದ್ದೆ ಅವಳು 'ಮೊಲೆಮುಡಿ ಇದ್ದುದು ಹೆಣ್ಣೆಂದು ಪ್ರಮಾಣಿಸಲಿಲ್ಲ ಕಾಸೆಮೀಸೆ ಕಠಾರವಿದ್ದುದು ಗಂಡೆಂದು ಪ್ರಮಾಣಿಸಲಿಲ್ಲ ಅದು ಜಗದ ಮಾಹೆ. ಬಲ್ಲವರ ನೀತಿಯಲ್ಲ. ಏತರ ಹಣ್ಣಾದರೂ ಮಧುರವೆ ಕಾರಣ ಇದರಿಂದ ನೀನೆ ಬಲ್ಲೇ ಎಂಬ ಹೊಸ ವಿಚಾರದತ್ತ ಗಮನ ಸೆಳೆಯುತ್ತಾಳೆ.ಈ ವರೆಗೆ ವಚನಕಾರರು ಕೊಟ್ಟ ಹೆಣ್ಣಿನ ನೋಟ ಕ್ರಮವನ್ನು ತನ್ನದೇ ಭಿನ್ನವಾದ ವೈಚಾರಿಕ ನೆಲೆಯಲ್ಲಿ ನಮ್ಮ ಮುಂದಿಡಿತ್ತಾಳೆ.

ಈಗೆ ಸುಮಾರು ಮೂವತ್ತು ಮಂದಿ ಅಕ್ಕಮಹಾದೇವಿ, ಸತ್ಯಕ್ಕನಂತಹ ಸಮಾಜದ ಎಲ್ಲ ವರ್ಗದ ಸ್ತ್ರೀಯರು ವಚನ ರಚನೆ ಮಾಡಿದರು. ಹಿಂದೆ ಯಾವ ಸಂದರ್ಭದಲ್ಲಿಯೂ ಕನ್ನಡ ನಾಡಿನಲ್ಲಿ ಸ್ತ್ರೀಯರು ಸಾಹಿತ್ಯ ರಚಿಸಿದ ಉಲ್ಲೇಖವಿಲ್ಲ. ಇದ್ದಕ್ಕಿದ್ದಂತೆ ಬೀಸಿದ ಹೊಸ ಆತ್ಮ ವಿಶ್ವಾಸದ ಗಾಳಿಯು ಸ್ತ್ರೀಯರಲ್ಲಿ ವಿಚಾರ ಹರುವುಗಳನ್ನು ಹೊಮ್ಮಿಸಿತು.ವಚನಕಾರ್ತಿಯರ ರಚನೆಗಳಲ್ಲಿ ವೈವಿಧ್ಯವೂ ಇದೆ; ಅವರ ಆಲೋಚನಾ ವಿಧಾನವು ಸ್ಪಷ್ಟವಾಗಿದೆ.

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ವಚನ ಸಾಹಿತ್ಯ ಒಂದು ಅಪೂರ್ವ ಭಾಗವಾಗಿ ಒಂದು ವೈಚಾರಿಕ ಪಥ್ಯವಾಗಿ ನಮ್ಮೆದುರು ನಿಲ್ಲುತ್ತದೆ. ಈಡೀ ವಚನ ಸಾಹಿತ್ಯದ ಅಭ್ಯಿಯನ್ನು ಹೆಕ್ಕಿ ನೋಡಿದಷ್ಟು ವೈಚಾರಿಕತೆಯ ಮುತ್ತುಗಳ ಚಿಪ್ಪು ತೆರೆದುಕೊಳ್ಳುತ್ತಲೇ ಇರುತ್ತದೆ ಸಾವಿರಾರು ವರ್ಷಗಳ ಇತಿಹಾಸವಿದ್ದ ಧಾರ್ಮಿಕ – ಸಾಮಾಜಿಕ ವ್ಯವಸ್ಥೆಯೊಂದನ್ನು ಅದರಿಂದಾಗಿ ಶೋಷಣೆಗೊಳಗಾದ ಕೆಳವರ್ಗದ ಜನಸಮುದಾಯಗಳೇ ತಿರಸ್ಕರಿಸಿ ಹೊಸ ವ್ಯವಸ್ಥೆಯೊಂದನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ್ದು ನಿಜಕ್ಕೂ ಚಿರಸ್ಮರಣೀಯವಾದ ಘಟನೆ. ಇಡೀ ಈ ವಚನ ಚಳುವಳಿಯು ಯಾರೋ ಒಬ್ಬ ಬಸವ, ಅಲ್ಲಮರಂತವರ ನಾಯಕತ್ವದಲ್ಲಿ ನಡೆದ ಚಳುವಳಿಯಾಗದೆ, ಸಾಮೂಹಿಕ ನಾಯಕತ್ವದಲ್ಲಿ ಜರುಗಿದ ಒಂದು ದೊಡ್ಡ ವೈಚಾರಿಕ ಕ್ರಾಂತಿ. ವಚನ ಚಳುವಳಿಯ ಪಥ್ಯ ಎಲ್ಲಿವರೆಗೆ ತನ್ನ ವೈಚಾರಿಕತೆಯ ನಿಲುವುಗಳನ್ನು ಚಾಚಿಕೊಂಡಿತ್ತೆಂದರೆ ದೇಹವನ್ನೇ ದೇವಾಲಯವಾಗಿಸುವುದರಿಂದ ಇಡಿದು ಇಷ್ಟಲಿಂಗದ ಅರಿವಿನ ಹಾದಿಯವರೆಗೆ ತನ್ನ ಅನಂತ ಪ್ರಶ್ನೆಗಳನ್ನು ಬೆಳಸಿದೆ ಈಗೆ ವಚನ ಸಾಹಿತ್ಯ ನಮ್ಮ ಪ್ರತಿ ಓದಿನಲ್ಲೂ ಕಾಲದ ಹಂಗುಮೀರಿ ಒಂದು ವೈಚಾರಿಕ ಪಥ್ಯವಾಗಿ ನಮ್ಮನ್ನು ಎಲ್ಲ ಸಾಂಸ್ಕೃತಿಕ ಅನುಸಂಧಾನದ ಸಂದರ್ಭದಲ್ಲಿ ಜಾಗೃತಗೊಳಿಸುತ್ತಲೇ ಸಾಗುತ್ತದೆ.

**ಅಡಿಟಿಪ್ಪಣಿಗಳು**

1. ಪ್ರಾಚೀನ ಕಾವ್ಯಚಿಂತನ, ಸಾ.ರಾಗೌ. ಪು.೧೩೬
2. ಅಲ್ಲಮನ ವಚನಗಳು., ಪಿ.ವಿ.ನಾರಾಯಣ ಪು. ೪೩.
3. ಬಸವಣ್ಣನ ವಚನಗಳು., ಪಿ.ವಿ. ನಾರಾಯಣ ಪು.ಪ್ರಸ್ತಾವನೆ.
4. ಬಸವಣ್ಣನ ವಚನಗಳು., ಪಿ.ವಿ. ನಾರಾಯಣ ಪು. ೬೭.
5. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ.ಡಾ.ಸಿ. ವೀರಣ್ಣ ಪು– ೮೧.
6. ಅಕ್ಕನ ವಚನಗಳು., ಡಾ. ಪಿ.ವಿ. ನಾರಾಯಣ ಪು–೩೩
7. ಶರಣರ ಆಯ್ದ ವಚನಗಳ ವ್ಯಾಖ್ಯಾನ, ಜಯಶ್ರೀ ದಂಡೆ., ಪು.೧೮೯.

**ಪರಾಮರ್ಶನ ಗ್ರಂಥಗಳು**


1. ಪ್ರೊ. ರಾಮಚಂದ್ರನ್. ಸಿ.ಎನ್., ಬಯಲು ರೂಪ ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩
2. ನಾಗರಾಜಪ್ಪ. ಕೆ.ಜಿ., ಅನುಶ್ರೇಣಿಯಜಮಾನಿಕೆ., ಅಭಿನವ ಪ್ರಕಾಶನ, ಬೆಂಗಳೂರು, ೨೦೧೮

3. ಚಿದಾನಂದ ಮೂರ್ತಿ. ಎಂ., ವಚನಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೮.
4. ಡಾ. ನಾರಾಯಣಪಿ.ವಿ.., ಬಸವಣ್ಣನ ವಚನಗಳು., ಅಂಕಿತ ಪುಸ್ತಕ, ಬೆಂಗಳೂರು, ೨೦೧೮.
5. ಡಾ. ನಾರಾಯಣ.ಪಿ.ವಿ., ಅಲ್ಲಮನ ವಚನಗಳು., ಅಂಕಿತ ಪುಸ್ತಕ, ಬೆಂಗಳೂರು, ೨೦೧೮.
6. ಡಾ. ನಾರಾಯಣ.ಪಿ.ವಿ., ಅಕ್ಕನ ವಚನಗಳು., ಅಂಕಿತ ಪುಸ್ತಕ, ಬೆಂಗಳೂರು, ೨೦೧೮.
7. ಡಾ..ವೀರಣ್ಣ. ಸಿ, ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ., ನವಕರ್ನಾಟಕ ಬೆಂಗಳೂರು ೨೦೧೭.
8. ಡಾ. ವಾಸುದೇವಮೂರ್ತಿ. ಟಿ.ಎನ್., ಪಾಷಾಣದ ಹಂಗು, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೧.
9. ಡಾ.ರಾಗೌ., ಪ್ರಾಚೀನ ಕಾವ್ಯ ಚಿಂತನೆ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೧೫.
10. ಸಾಹಿತ್ಯ ವೈಜ್ಞಾನಿಕ ಮೀಮಾಂಸೆ., ಮನೋಹರ ಗ್ರಂಥಮಾಲಾ ಧಾರವಾಡ, ೨೦೧೬.